ಕವಿತೆ




ತೇರ್‌ ಳಿ ಎನ್‌. ಶೇಖರ್‌

ಕಲೆ: ರೂಪಶ್ರೀ ಕಲ್ಲಿಗನೂರು

# ಮರೆತುಹೋದುದು

ಆ ಹೃದಯ ಸಿಕ್ಕರೆ
ಅದನ್ನೇ ಅಳವಡಿಸಿ ಒಲವನು
ಉಳಿಸಿಬಿಡಬಹುದೆಂಬ ಇವಳಿತ್ತ
ಭರವಸೆಯೊಂದಿಗೆ:

ಅಪಹರಿಸಲ್ಪಟ್ಟ ನನ್ನ ಹೃದಯವನ್ನು
ಮರಳಿ ಪಡೆಯುವುದಕ್ಕಾಗಿ
ಹೊತ್ತುಗೊತ್ತೆನ್ನದೆ ನಾನವಳನ್ನು
ಹುಡುಕಿಕೊಂಡು ಹೋದೆ. ಅವಳು–
ಒಳಗಿನಿಂದ ಹೊರಬಂದಳು.
ಆಗಷ್ಟೇ ನನ್ನ ಕಂಡವಳ ಹಾಗೆ
ಅದೇ ಚಂದದ ಹೂನಗೆ ಬೀರಿದಳು.
ಕುಳಿತುಕೊಳ್ಳಲು ಮೆತ್ತನೆಯ
ದಿವಾನ್ ಕಾಟನ್ನು ತೋರಿದಳು
ತಿನ್ನಲು ತರಾವರಿ ಕರಿದ ತಿಂಡಿಗಳನ್ನೂ
ಕುಡಿಯಲು ತ್ರಿರೋಸ್ ಟೀಯನ್ನೂ ತಂದಿಟ್ಟಳು.
ಜೇನಹನಿಯ ಅದೇ ಮಧುರನುಡಿಗಳಿಂದ ಕಿವಿ
ತುಂಬಿದಳು.
ಅವುಗಳನ್ನೆಲ್ಲ ಮರೆಯದಂತೆ ನೆನಪಿಸಿಕೊಳ್ಳಲು
ನಾಳೆಗಳನ್ನೂ ಅರ್ಪಿಸಿದಳು; ಬುದ್ಧನದಂಥ ತನ್ನ
ಶಾಂತ ಅಕ್ಷಿಗಳಲ್ಲಿ ತೊಟ್ಟಿಕ್ಕಿದ ಕರುಣೆಯನ್ನೂ
ದಯಪಾಲಿಸಿದಳು.
ಇಲ್ಲಿಂದ ಮರಳಿ ಹೋದಮೇಲೆ
ಎಲ್ಲಾ ಮರೆತುಬಿಡಬೇಕೆಂದು
ಕಠೋರ ಎಚ್ಚರಿಕೆಯ ಆದೇಶವನ್ನು ನೀಡಿ
ಬೀಳ್ಕೊಟ್ಟಳು



2
ನಾನು ಮರಳಿ ಬರುವಾಗ ಪಡೆಯಬೇಕಿದ್ದ
ನನ್ನ ಹೃದಯವನ್ನು ಅವಳಲ್ಲೇ ಬಿಟ್ಟುಬಿಟ್ಟೆ
ಅವಳು ಅಪಹರಿಸಿ ತನ್ನದಾಗಿ ಮಾಡಿಕೊಂಡಿದ್ದನ್ನು
ಹೇಗೆ ಕೇಳುವುದೆಂದರಿಯದೆ ಬಹಳ ಸಂಕಟಪಟ್ಟೆ

ಈ ಸಂಕಟದಲ್ಲೇ ದಾರಿಯಲೆಲ್ಲಾ ತೊಳಲಾಡಿದೆ.
ಈ ತೊಳಲಾಟವೇ ಬದುಕೆಂಬುವುದನ್ನು ಮಾತ್ರ
ಮರೆತುಹೋದೆ.